ಸಂಖ್ಯೆ.ಎಂಎಸ್‌ಸಿ-3123:96-97

ವಿಭಾಗಾಧಿಕಾರಿಗಳವರ ಕಚೇರಿ,
ಮೈಸೂರು ವಿಭಾಗ
ಮೈಸೂರು, ದಿನಾಂಕ: 10-10-96
15

## ಸುತ್ತೋಲೆ

ವಿಷಯ: ಬ್ರಾಹ್ಮಣ ಕೋಮಿಗೆ ಸೇರಿದ ವಿದ್ಯಾರ್ಥಿಗಳಿಗೆ ಆದಾಯ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರದ ಸಂ.ಆರ್‌ಡಿ-329-ಎಂಎಸ್‌ಸಿ-96 ದಿನಾಂಕ: 27-9-96.

-:-

ಬ್ರಾಹ್ಮಣ ಕೋಮಿಗೆ ಸೇರಿದ ವಿದ್ಯಾರ್ಥಿಗಳಿಗೆ ಆದಾಯ ಪ್ರಮಾಣ ಪತ್ರಗಳನ್ನು ನೀಡುತ್ತಿಲ್ಲವಾದ್ದರಿಂದ ಸ್ಕಾಲರ್‌ಶಿಪ್ ಮಂಜೂರಾತಿ ಮುಂತಾದ ಸಂದರ್ಭಗಳಲ್ಲಿ ತೊಂದರೆಯಾಗುತ್ತಿದ್ದು, ಈ ಬಗ್ಗೆ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಶ್ರೀ ಡಿ.ಬಿ. ಕಲ್ಮಣಕರ್ ರವರು ಮಾನ್ಯ ಕಂದಾಯ ಸಚಿವರಿಗೆ ಪತ್ರ ಬರೆದು ತಿಳಿಸಿದ್ದರ ಮೇರೆ, ಮಾನ್ಯ ಕಂದಾಯ ಸಚಿವರು ಈ ಬಗ್ಗೆ ಕ್ರಮಕೈಗೊಳ್ಳುವುದಾಗಿ ಸದನಕ್ಕೆ ಭರವಸೆ ನೀಡಿರುವುದಾಗಿ ತಿಳಿಸಿದ್ದರ ಹಿನ್ನೆಲೆಯಲ್ಲಿ, ಸರ್ಕಾರವು ಉಲ್ಲೇಖದ ಪತ್ರದಲ್ಲಿ, ಬ್ರಾಹ್ಮಣ ಕೋಮಿಗೆ ಸೇರಿದ ವಿದ್ಯಾರ್ಥಿಗಳಿಗೆ ಆದಾಯ ಪ್ರಮಾಣ ಪತ್ರವನ್ನು ನೀಡಲು ಕ್ರಮಕೈಗೊಳ್ಳುವಂತೆ ಹಾಗೂ ಆ ರೀತಿ ಕ್ರಮವಹಿಸದ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಮೈಸೂರು ವಿಭಾಗದ ಎಲ್ಲಾ ತಹಸೀಲ್ದಾರ್‌ರವರುಗಳಿಗೆ ನಿರ್ದೇಶನ ನೀಡಲು ನಿರ್ದೇಶಿಸಲಾಗಿದೆ.

ಮೈಸೂರು ವಿಭಾಗದ ಎಲ್ಲಾ ತಹಸೀಲ್ದಾರ್‌ರವರುಗಳು ಬ್ರಾಹ್ಮಣ ಕೋಮಿನ ವಿದ್ಯಾರ್ಥಿಗಳು ಆದಾಯ ಪ್ರಮಾಣ ಪತ್ರ ಕೋರಿ ಅರ್ಜಿ ಸಲ್ಲಿಸಿದಲ್ಲಿ, ನಿಯಮಗಳನುಸಾರ ಪರಿಶೀಲಿಸಿ, ಆದಾಯ ಪ್ರಮಾಣ ಪತ್ರ ನೀಡಲು ತಿಳಿಸಿದೆ. ಈ ಬಗ್ಗೆ ಸಂಬಂಧಪಟ್ಟ ಗ್ರಾಮಲೆಕ್ಕಿಗರಿಗೆ, ರಾಜಸ್ವನಿರೀಕ್ಷಕರುಗಳಿಗೆ, ತ್ವರಿತವಾಗಿ ಕ್ರಮಕೈಗೊಳ್ಳಲು ತಿಳಿಸಬೇಕಾಗಿ ಸೂಚಿಸಿದೆ. ಯಾರಿಂದಲೂ ದೂರು ಬಾರದಂತೆ ಕ್ರಮ ಜರುಗಿಸಲು ತಿಳಿಸಿದೆ.

ವಿಭಾಗಾಧಿಕಾರಿ,
ಮೈಸೂರು ವಿಭಾಗ
ಮೈಸೂರು.

ಪ್ರತಿಯನ್ನು ಕೆಳಕಂಡವರಿಗೆ ಕಳುಹಿಸಿದೆ:-

1) ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು.
2) ಮೈಸೂರು ವಿಭಾಗದ ಎಲ್ಲಾ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು: ತಹಸೀಲ್ದಾರ್‌ಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

ಎಂಎಸ್: